# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ : ತುವಿ:ಶಿಂ/ವಿ.ಪ.ಸ:2017-18/14055 ದಿನಾಂಕ:22.03.2018

-: ಅಧಿಸೂಚನೆ :-

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್‌ನ ಪ್ರಾಧಿಕಾರಕ್ಕೆ ಸರ್ಕಾರದ ನಾಮನಿರ್ದೇಶನ ಸದಸ್ಯರನ್ನು ನೇಮಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 19 ಯುಟಿಐ 2016, ದಿನಾಂಕ:20.03.2018

2.ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:22.03.2018

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 30(1) (vii) ರನ್ವಯ ಈ ಕೆಳಕಂಡವರುಗಳನ್ನು ತುಮಕೂರು ವಿಶ್ವವಿದ್ಯಾನಿಲಯದ **ವಿದ್ಯಾವಿಷಯಕ ಪರಿಷತ್ತಿನ ಪ್ರಾಧಿಕಾರಕ್ಕೆ** ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅದೇ ಅಧಿನಿಯಮದ ಪ್ರಕರಣ39(1)ರ ಉಪಬಂಧಕ್ಕೊಳಪಟ್ಟು ಉಲ್ಲೇಖ (1) ರಂತೆ ನಾಮನಿರ್ದೇಶನ ಮಾಡಿ ಅಧಿಸೂಚಿಸಲಾಗಿದೆ.

| ಕ್ರ. ಸಂ | ಹೆಸರು ಮತ್ತು ವಿಳಾಸ | ವಿದ್ಯಾರ್ಹತೆ | ವೃತ್ತಿ/ಕ್ಷೇತ್ರ |
|---|---|---|---|
| 1 | 2 | 3 | 4 |
| 1. | ಶ್ರೀ ಎಸ್. ಪುರುಷೋತ್ತಮರಾವ್ ಸಿಂಧ್ಯಾ<br>ನಂ. 31, ಊರ್ಡಿಗೆರೆ, ತುಮಕೂರು ತಾಲ್ಲೂಕು | ಪದವೀಧರ | ಶಿಕ್ಷಣ |
| 2. | ಶ್ರೀ ಸಿ. ಎನ್. ನರಸಿಂಹಮೂರ್ತಿ,<br>ನಿವೃತ್ತ ಪ್ರಾಂಶುಪಾಲರು, ತುಮಕೂರು | ಪದವೀಧರ | ಶಿಕ್ಷಣ |
| 3. | ಶ್ರೀ ನಾರಾಯಣ ಎಂ<br>ನಿವೃತ್ತ ಉಪನ್ಯಾಸಕರು<br>ವಾರ್ಡ್ ನಂ. 2, ಶಿರಾಗೇಟ್ | ಎಂ.ಎ | ಶಿಕ್ಷಣ |

o/c

**ಮೇಲ್ಕಂಡ ನಾಮನಿರ್ದೇಶನಗಳು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತವೆ.**

1. ನಾಮನಿರ್ದೇಶಿತ ಸದಸ್ಯರು ಪಡೆದಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳ ನೈಜತೆ/ಋಜುತ್ವದ ಬಗ್ಗೆ ಪದವಿ ಪಡೆದ ವಿಶ್ವವಿದ್ಯಾನಿಲಯಗಳಿಂದ ದೃಢೀಕರಿಸಿದ ಕುರಿತು ಪ್ರಮಾಣ ಪತ್ರಗಳನ್ನು ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಪ್ರಕರಣ 30(1) (vii) ಪರಂತುಕದಲ್ಲಿ ಗೊತ್ತುಪಡಿಸಿರುವಂತೆ, ನಾಮನಿರ್ದೇಶಿತ ಸದಸ್ಯರು, ತುಮಕೂರು ವಿಶ್ವವಿದ್ಯಾನಿಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗೆ ಶೈಕ್ಷಣಿಕ ವೃತ್ತಿಯನ್ನು ಪ್ರತಿನಿಧಿಸುವ ಕುರಿತು ವಿಶ್ವವಿದ್ಯಾನಿಲಯವು ದೃಢೀಕರಿಸಿಕೊಂಡು ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
3. ನಾಮನಿರ್ದೇಶಿತ ವ್ಯಕ್ತಿಗಳು ವಿದ್ಯಾವಿಷಯಕ ಪರಿಷತ್ತಿನ ಸದಸ್ಯತ್ವದ ಅವಧಿಯಲ್ಲಿ ಸದ್ವರ್ತನೆ ತೋರತಕ್ಕದ್ದು ಮತ್ತು ಸರ್ಕಾರದ ಹಾಗೂ ಯುಜಿಸಿ ಕಾರ್ಯನೀತಿಗೆ ಬದ್ಧರಾಗಿರತಕ್ಕದ್ದು.
4. ತುಮಕೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ನಿಕಾಯವಾಗಿರುವ ವಿದ್ಯಾವಿಷಯಕ ಪರಿಷತ್ತಿನ ಜವಾಬ್ದಾರಿಗಳನ್ನು ಕಾರ್ಯತತ್ಪರತೆಯಿಂದ ನಿರ್ವಹಿಸತಕ್ಕದ್ದು ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಷಯಗಳ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸತಕ್ಕದ್ದು.
5. ಈ ಷರತ್ತುಗಳ ಪಾಲನೆಯಲ್ಲಿನ ವಿಫಲತೆಯು ವಿದ್ಯಾವಿಷಯಕ ಪರಿಷತ್ತಿನ ನಾಮನಿರ್ದೇಶನವನ್ನು ಪುನರಾವಲೋಕಿಸುವ ಅಥವಾ ಹಿಂಪಡೆಯುವ ಪರಿಣಾಮ ಹೊಂದಿರುತ್ತದೆ.

22/3/18

ಕುಲಸಚಿವರು

ಕುಲಸಚಿವರು

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಪು.ತಿ.ನೋ

ಗೆ

ಮೇಲ್ಕಂಡ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಥಿ, ಬೆಂಗಳೂರು.
3. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ವಿಧಾನಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀಥಿ, ಬೆಂಗಳೂರು.
5. ಕುಲಸಚಿವರು (ಪರೀಕ್ಷಾಂಗ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಹಣಕಾಸು ಅಧಿಕಾರಿಗಳು (ಪ್ರ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಮಾನ್ಯ ಕುಲಸಚಿವರ ಆಪ್ತ ಕಾರ್ಯಲಯ, ತುಮಕೂರು ವಿಶ್ವವಿದ್ಯನಿಲಯ, ತುಮಕೂರು.
9. ಉಪಕುಲಸಚಿವರು, ಸಿಬ್ಬಂದಿ/ಶೈಕ್ಷಣಿಕ/ಸಾಮಾನ್ಯ & ಅಭಿವೃದ್ಧಿ ಮತ್ತು ಪರೀಕ್ಷಾಂಗ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ನಿರ್ದೇಶಕರು ಪಿ.ಎಚ್.ಡಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
11. ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
12. ಕಚೇರಿ ಪ್ರತಿ.